**CCE PR**

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

ಎಸ್.ಎಸ್.ಎಲ್.ಸಿ. ಪರೀಕ್ಷೆ, ಜೂನ್, 2017

**S. S. L. C. EXAMINATION, JUNE, 2017**

# ಮಾದರಿ ಉತ್ತರಗಳು

# MODEL ANSWERS

ದಿನಾಂಕ : 20. 06. 2017 ] ಸಂಕೇತ ಸಂಖ್ಯೆ : **33-K**

Date : 20. 06. 2017 ] CODE NO. : **33-K**

## ವಿಷಯ : ದ್ವಿತೀಯ ಭಾಷೆ — ಕನ್ನಡ

## Subject : Second Language — KANNADA

(ಹೊಸ ಪಠ್ಯಕ್ರಮ / New Syllabus)

(ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Repeater)

[ ಗರಿಷ್ಠ ಅಂಕಗಳು : 100

[ Max. Marks : 100

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ವಿಭಾಗ – 'ಎ' | |
| | ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ : | |
| | (ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) | 14 × 1 = 14 |
| 1. | ಜಿಂಕೆಯು ಬೇಡನ ಬಾಣದ ಹೊಡೆತದಿಂದ ಹಾರಿ ತಪ್ಪಿಸಿಕೊಂಡಿತು. | |
| 2. | ಗಿಳಿಯ ತತ್ವನಿಷ್ಠೆಯ ಗುಣವನ್ನು ಇಂದ್ರನು ಮೆಚ್ಚಿಕೊಂಡನು. | |
| 3. | ಸಾಧನೆಗೆ ಅವಶ್ಯಕವಾದುದು ಏಕಾಗ್ರತೆ, ಚುರುಕುತನ, ತತಕ್ಷಣ ಪ್ರತಿಕ್ರಿಯಿಸುವಿಕೆ ಮತ್ತು ಅರ್ಪಣಾ ಮನೋಭಾವ. | |
| 4. | ಪುಟ್ಟರಾಜರು ಹುಟ್ಟಿದ ಊರು ಹಾವೇರಿ ಜಿಲ್ಲೆಯ ದೇವಗಿರಿ. | |
| 5. | ಅಜ್ಜನು ಅಕ್ಕಿಯನ್ನು ಹಾಸಿಗೆಯ ಸುರುಳಿಯಲ್ಲಿ ಸುತ್ತಿ ತೆಗೆದುಕೊಂಡು ಹೋದರು. | |
| 6. | ಗುರುರಾಜ ಕರಜಗಿಯವರ ಅಜ್ಜನ ಹೃದಯದಲ್ಲಿಯ ಪ್ರೀತಿ ಕಾಯಿದೆಯನ್ನು ಮೀರಲು ಕಾರಣವಾಯಿತು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 7. | ರೇಷನ್ ಪದ್ಧತಿಯ ಪ್ರಕಾರ ಜಿಲ್ಲೆಯಿಂದ ಮತ್ತೊಂದು ಜಿಲ್ಲೆಗೆ ಅಕ್ಕಿ ಮತ್ತು ಸಕ್ಕರೆಯನ್ನು ಸರ್ಕಾರದ ಪರವಾನಗಿಯಿಲ್ಲದೆ ಒಯ್ಯುವಂತೆ ಇರಲಿಲ್ಲ. | |
| 8. | ಗೋಪಾಲನ ಗೆಳೆಯರೆಲ್ಲ ಹೊಸ ಬಟ್ಟೆಯನ್ನು ಧರಿಸಿ ಬರುತ್ತಿದ್ದುದರಿಂದ ತನಗೂ ಹೊಸ ಪಂಚೆಯನ್ನು ಬಯಸಿದನು. | |
| 9. | ಮುಗ್ಧ ಮಗುವಿನ ನಂಬಿಕೆಗೆ ಗೊಮ್ಮಟನು ನಕ್ಕು ಬಿಟ್ಟನು. | |
| 10. | ಸಿ.ಪಿ.ಕೆ.ಯವರು ಸಿಡುಕು-ಮಿಡುಕನ್ನು ತೊರೆದು ಮೌನಿಯಾಗು ಎಂದಿದ್ದಾರೆ. | |
| 11. | ಹಗಲಿರುಳು ಜೀವನದ ಹೆಗ್ಗುರಿಗಾಗಿ ಹೋರಾಡಬೇಕಾಗಿದೆ. | |
| 12. | ಮಕ್ಕಳ ಹಸಿವನ್ನು ಬಲ್ಲವರು ತಾಯಿ. | |
| 13. | ಪುಣ್ಯತೀರ್ಥಗಳು ಬರದಿದ್ದಾಗ ಕೆರೆ ತೋಡಿದರೂ ನಿಷ್ಫಲವಾಗುತ್ತದೆ. | |
| 14. | ಧನವಿದ್ದವರಲ್ಲಿ ಇರಬೇಕಾದ ಗುಣವೆಂದರೆ ದಯೆ. | |
| | **ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು :** (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕಗಳು) | $15 \times 2 = 30$ |
| 15. | ದೇವರಾಜ ವರವನ್ನು ಕೊಡುವ ಇಚ್ಛೆ ಇದ್ದರೆ ಈ ಮರಕ್ಕೆ ಮೊದಲಿನಂತೆ ಹಸಿರಿನಿಂದ, ಕಳಕಳಿಸುವ ಫಲಪುಷ್ಪ ಭಾರದಿಂದ ಬೀಗುವ, ನೆರಳನ್ನು ಕೊಡುವ ವರವನ್ನು ದಯಪಾಲಿಸು; ಎಂದು ಗಿಳಿಯು ಇಂದ್ರನಲ್ಲಿ ವರವನ್ನು ಕೇಳಿತು. | |
| 16. | ರಾಹುಲ್ ದ್ರಾವಿಡ್ ಶಾಲಾ ಅಭ್ಯಾಸದ ಜೊತೆಯಲ್ಲಿ ಕ್ರಿಕೆಟಿಗೆ ಒಂದಷ್ಟು ಸಮಯವನ್ನು ಮೀಸಲಾಗಿಟ್ಟು ಸತತ ಅಭ್ಯಾಸ ಮಾಡುತ್ತಿದ್ದರು. ಇದೇ ವೇಳೆ ಕೆ.ಕೆ. ತಾರಾಪುರರವರು ಇವರ ಪ್ರತಿಭೆಗೆ ನೀರೆರೆದರು. ಇದರ ಫಲವಾಗಿ ಹನ್ನೆರಡನೆಯ ವಯಸ್ಸಿನಲ್ಲಿ ಶಾಲಾ ತಂಡಕ್ಕೂ, ಹದಿನೈದನೆಯ ವಯಸ್ಸಿನಲ್ಲಿ ಕರ್ನಾಟಕ ತಂಡದ ಸದಸ್ಯರಾದರು. ಅವರ ಸತತ ಪರಿಶ್ರಮಕ್ಕೆ ಸೂಕ್ತ ಸ್ಥಾನಮಾನವೂ ದೊರೆಯಿತು. | |
| 17. | ತಲೆಯ ಮೇಲೊಂದು ಕಾವಿ ಬಣ್ಣದ ಪಟಗಾ, ಹಣೆಯಲ್ಲಿ ಸದಾ ಎದ್ದು ಕಾಣುವ ವಿಭೂತಿ ಹುಬ್ಬುಗಳೆರಡರ ನಡುವೆ ಗಂಧದ ಬೊಟ್ಟು ಕೊರಳಲ್ಲಿ ರುದ್ರಾಕ್ಷಿ ಮಾಲೆ, ಕೊಂಚವೇ ಬಾಗಿದ ಕತ್ತು, ಕೈಯಲ್ಲೊಂದು ಊರುಗೋಲು ಇವೇ ಪುಟ್ಟರಾಜರೆಂದರೆ ಕಣ್ಣಿಗೆ ಕಟ್ಟುವ ಚಿತ್ರವಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 18. | ನಾಟಕ ಕ್ಷೇತ್ರಕ್ಕೆ ಪುಟ್ಟರಾಜರ ಕೊಡುಗೆಗಳೆಂದರೆ ಕಲಬುರ್ಗಿಯ ಶರಣಬಸವೇಶ್ವರ ನಾಟಕ, ಶ್ರೀ ಶಿವಲಿಂಗೇಶ್ವರ, ನಾಲತ್ವಾಡದ ವೀರೇಶ್ವರ, ಅಂಕಲಗಿ ಅಡವಿ ಸಿದ್ದೇಶ್ವರ, ಗುಡ್ಡಾಪುರದ ದಾನಮ್ಮ ಮೊದಲಾದ ನಾಟಕಗಳನ್ನು ಬರೆದು, ಕುಮಾರೇಶ್ವರ ನಾಟ್ಯ ಸಂಘವನ್ನು ಸ್ಥಾಪಿಸಿ ನಾಡಿನಾದ್ಯಂತ ಶಿವಶರಣರ ಕುರಿತ ನಾಟಕಗಳನ್ನು ಆಡಿಸಿ ಧರ್ಮಜಾಗೃತಿಯನ್ನು ಉಂಟು ಮಾಡಿದ್ದಾರೆ. | |
| 19. | ಪಶ್ಚಿಮ ಘಟ್ಟಗಳು ದಟ್ಟವಾದ ಕಾಡುಗಳಿಂದ ಕೂಡಿವೆ. ಜೇನು, ಜೀರುಂಡೆ, ಕೀಟ, ಪತಂಗಗಳಿಂದ ಹಿಡಿದು, ಕಾಡೆಮ್ಮೆ ಮದ್ದಾನೆಗಳವರೆಗೂ ಅಸಂಖ್ಯ ಜೀವಕೋಟಿಗಳ ಆಶ್ರಯ ತಾಣವಾಗಿದೆ.<br><br>ಧುಮ್ಮಿಕ್ಕುವ ಜಲಪಾತ, ಬಿಸಿನೀರಿನ ಬುಗ್ಗೆ, ಹಿಮಶೀತಲ ಸರೋವರ, ಸೂಜಿಮೊನೆಯಂಥ ಶಿಖರ, ದುರ್ಗಮ ಪ್ರಪಾತ, ಅನೇಕ ಖನಿಜ ಸಂಪತ್ತುಗಳಿಂದ ಕೂಡಿರುವ ಒಂದು ವೈಚಿತ್ರ್ಯದ ಗುಡಾಣವಾಗಿದೆ. | |
| 20. | ಹಾಸಿಗೆ ಸುರುಳಿಯಲ್ಲಿ ಅಕ್ಕಿಯನ್ನು ಹೊತ್ತು ಯಾರ ಕೈಗೂ ಸಿಗದೆ ಬೇಗಬೇಗನೇ ರೈಲು ನಿಲ್ದಾಣದಿಂದ ಹೊರಬರುತ್ತಿದ್ದಾಗ, ಅಜ್ಜನ ಹೆಗಲ ಮೇಲೆ ಪೊಲೀಸನೊಬ್ಬನು ಕೈ ಹಾಕಿ ನಡೀರಿ ನಿಮ್ಮನ್ನು ಸಾಹೇಬ್ರು ಕರೀತಿದಾರೆ ಎಂದು ಹೇಳಿ ಜೀಪಿನಲ್ಲಿ ಕರೆದುಕೊಂಡು ಹೋಗುತ್ತಾರೆ. ಅಜ್ಜ ಭಯದಿಂದ ಕುಸಿದು ಪೊಲೀಸ್ ಅಧಿಕಾರಿಯ ಮನೆಯೊಳಗೆ ಕಾಲಿಡುತ್ತಿದ್ದಂತೆ ಅಪರಾಧಿ ಭಾವದಿಂದ ಕೈಮುಗಿದು "ತಪ್ಪಾತರೀ ಸಾಹೇಬರ" ಎಂದು ಹೇಳುತ್ತಾನೆ. | |
| 21. | ಅಮ್ಮಾ ನನಗೊಂದು ಹೊಸ ಪಂಚೆಯನ್ನು ಕೊಡುವೆನೆಂದು ಮೊನೆ ಹೇಳಿದ್ದೆ, ಇಂದು ಕೊಡುತ್ತೀಯಾ ? ನನ್ನ ಗೆಳೆಯರೆಲ್ಲ ಹೊಸ ಬಟ್ಟೆಧರಿಸಿಕೊಂಡು ಬಂದು ನನ್ನನ್ನು ಹಾಸ್ಯ ಮಾಡುತ್ತಾರೆಂದು ಗೋಪಾಲನು ತಾಯಿಯನ್ನು ಕೇಳಿದಾಗ, ತಾಯಿಗೆ ಆಗ ತನ್ನ ಬಡತನದ ಅರಿವಾಗುತ್ತದೆ. | |
| 22. | ತಾಯಿಯು ತನಗೆ ಸ್ನಾನ ಮಾಡಿಸುವ ಮೊದಲು ಎಣ್ಣೆ ಹಚ್ಚಿ ಬರೀ ಮೈಯಲ್ಲಿ ನಿಲ್ಲಿಸುತ್ತಾಳ. ಹಾಗೆಯೆ ಗೊಮ್ಮಟೇಶ್ವರನೂ ಬರೀ ಮೈಯಲ್ಲಿ ನಿಂತು ಅಮ್ಮ ತರುವ ತಂಬಿಗೆಯ ಬಿಸಿ ನೀರಿಗಾಗಿ ಕಾಯುತ್ತಾ ನಿಂತಿದ್ದಾನೆ. ಅಂದರೆ ಇವನು ನನ್ನ ಹಾಗೆಯೇ ಬರಿ ಮೈಯಲ್ಲಿ ಇದ್ದಾನೆಂದು ಮಗುವು ತಿಳಿಯುತ್ತದೆ. | |
| 23. | ತಿಮಿರ ಎಂದರೆ ಕತ್ತಲು; ದೀಪವು ಬೆಳಕನ್ನು ನೀಡಿ ತಿಮಿರ (ಕತ್ತಲು) ವನ್ನು, ಸರಿಯುವಂತೆ ಮಾಡುತ್ತದೆ, ಆದರೆ ಇಲ್ಲಿ ಯಾವುದೇ ಸದ್ದು–ಗದ್ದಲ ಇಲ್ಲದೆ ಕತ್ತಲು ಕರ್ಪೂರ ಮೌನವಾಗಿ ಕರಗುವಂತೆ, ಇಬ್ಬನಿ ರವಿಕರಕೆ ಕರಗುವಂತೆ ಮೌನವಾಗಿ ದೀಪದೆದುರಿಗೆ ಸರಿಯುತ್ತದೆಂದು ಕವಿಯು ಹೇಳುತ್ತಾರೆ. | |
| 24. | ಕವಿ ಗೋಪಾಲಕೃಷ್ಣ ಅಡಿಗರವರು ನರನೊಳಗೆ ನಾರಾಯಣನ ರೂಪ ಕಂಡು ತಿರೆಯೊಳಗೆ ಸುರಪುರದ ಮೈಸಿರಿಯನ್ನು ಅನುಭವಿಸಿ ಪರರ ಹಿತಕ್ಕಾಗಿ ಚಿಂತೆ ಮಾಡುವುದೇ (ಜೀವಿಸುವುದೇ) ಜೀವನ ಎಂದು ಹೇಳಿದ್ದಾರೆ. ಅಂತೆಯೇ ಬೇರೆ ಏನೇ ಎಸಗಿದರೂ ಅದು ನಮಗೆ ಅಪಕೀರ್ತಿ ಎಂದಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 25. | ಕಂದಯ್ಯ ಅತ್ತರೆ ಕಣಗೀಲು ಚಿಗುರುತ್ತವೆ. ಒಣಗಿದ್ದ ಬಾಳೆ ಚಿಗುರುತ್ತವೆ, ಬರಡಾಗಿರುವ (ಗೊಡ್ಡು ಹಸು) ಹಸುಗಳೂ (ಹೈನು) ಹಾಲು–ಮೊಸರುಗಳನ್ನು ನೀಡುತ್ತವೆಂದು ಜನಪದರು ತಮ್ಮ ಜನಪದಗೀತೆಗಳಲ್ಲಿ ಹೇಳಿರುವುದು ಒಂದು ಅಚ್ಚರಿಯಾಗಿದೆ. | |
| 26. | ಭಕ್ತಿ ಭಂಡಾರಿ ಬಸವಣ್ಣನವರು ಕುರುಡು ಸಂಪ್ರದಾಯದ ಬಗ್ಗೆ ಹೀಗೆ ವಿಮರ್ಶೆ ಮಾಡಿದ್ದಾರೆ; ನೀರ ಕಂಡಲ್ಲಿ ಮುಳುಗುವ ಜನ, ಮರನ ಕಂಡಲ್ಲಿ ಸುತ್ತುವ ಜನ; ಸಮಾಜದಲ್ಲಿರುವ ಇವರು ಬತ್ತುವ ಜಲ, ಒಣಗುವ ಮರವನ್ನು ನಂಬುತ್ತಾರೆ; ಆದರೆ ಕೂಡಲ ಸಂಗಮದೇವನನ್ನು ಎತ್ತ ಬಲ್ಲರೆಂದು ವಿಮರ್ಶಿಸಿದ್ದಾರೆ. | |
| 27. | ಯುದ್ಧ ಮಾಡಿ ಬಂದ ಪಾಪವನ್ನು ಭೂಸುರರು ಅಶ್ವಮೇಧ ಯಾಗವನ್ನು ಮಾಡಿ ಕಳೆದುಕೊಳ್ಳುವರು. ಆದರೆ ನಾವು ಯುದ್ಧ ಮಾಡದಯೆ ಭೂಮಿಯಲ್ಲಿ ಅಶ್ವಮೇಧಯಾಗವನ್ನು ಮಾಡಬಹುದು. ಸುರರ ಸತಿಯರನ್ನು, ಇಂದ್ರ ಪದವಿಯನ್ನು ನಾವು ಯುದ್ಧ ಮಾಡಿ ಪಡೆಯಬಹುದು. ಆದರೆ ಯುದ್ಧ ಮಾಡದೆ ನಮ್ಮ ಮನೆಯ ನಾರಿಯರೆ ಸಾಕು. ನಮ್ಮ ಅರಸುತನವೆ ನಮಗೆ ಇಂದ್ರಪದವಿ ಎಂದೂ, ಯುದ್ಧ ಮಾಡದೆ ಸುಖ ಪಡೆಯಬಹುದೆಂದು ಉತ್ತರನು ಹೇಳಿದನು. | |
| 28. | ಎರಡೋ ಮೂರೋ ತಲೆಮಾರುಗಳಷ್ಟು ಹಳೆಯ ಕುರ್ಚಿಯಲ್ಲಿ ಚೋಯಿಸರು ಕುಳಿತು ಒಂದು ಮಾತು ಹೇಳಿದರೆಂದರೆ ಕುಂದಾಪುರದಿಂದ ಶೃಂಗೇರಿಯವರೆಗಿನ ಆಸ್ತಿಕರಿಗೆಲ್ಲ ಅದೊಂದು ವೇದವಾಕ್ಯವಾಗುತ್ತಿತ್ತು. | |
| 29. | ಸಾವಿತ್ರಿಯು ತಾನು ಮಾಡಿದ ಅಡುಗೆಯನ್ನು ಗಂಡನಿಗೆ ಬಡಿಸಿ ತಾನೂ ಊಟಕ್ಕೆ ಕುಳಿತು ಬಿಕ್ಕಿಬಿಕ್ಕಿ ಅಳಲು ಪ್ರಾರಂಭಿಸಿದಳು. ಪತಿಯು ತಟ್ಟೆಯನ್ನೆಲ್ಲಾ ಖಾಲಿ ಮಾಡಿ ಅವಳನ್ನೂ ಊಟ ಮಾಡಲು ರಮಿಸಿ ಹೇಳಿದನು. ಆಗ ಮಡದಿಯು ಮೊದಲು ತುತ್ತನ್ನು ಬಾಯಿಗಿಟ್ಟಾಗ ಕಹಿಯಾಗಿ, ಅಯ್ಯೋ, ಕ್ಷಮಿಸಿ ಕ್ಷಮಿಸಿ ಎಂದು ಅವಳ ಮನವು ಹೇಳುತ್ತದೆ. | |
| 30. | **ಪದ್ಯಭಾಗ ಪೂರ್ಣಗೊಳಿಸಿ ಬರೆಯುವುದು :**<br>(ತಪ್ಪಿಲ್ಲದೆ ಬರೆದ ಪೂರ್ಣಸಾಲುಗಳಿಗೆ ಒಟ್ಟಾರೆ ಮೂರು ಅಂಕಗಳು)<br>ಕೊರಡ ಕೊನರಿಸಿ ತುದಿಗೆ ಮುಗುಳ ನಗೆ ಮುತ್ತಿಟ್ಟು<br>ಬರಡು ಜೀವಕೆ ಹೊಸತು ಚೈತನ್ಯವು<br>ಕುಕಿಲ ಕೋಗಿಲೆ ಕಂಠ ಮುಕ್ತ ತಾರಕಕೇರಿ<br>ಚಿಲಿಪಿಲಿಯ ಕಲರವಕೆ ಮತ್ತೇರಿದೆ.<br>**ಅಥವಾ**<br>ಯುಗದ ಹಿಂದಿನ ಕೊಳೆಯ ತಿಕ್ಕಿ ಮೈ ತೊಳೆದಂತೆ<br>ನಗುವ ನಲಿವಿನ ಮುಖವೆ ಎಲ್ಲೆಲ್ಲಿಯೂ<br>ಬೆಲ್ಲ ಬೇವಿಗೆ ಸೇರಿ ಕಹಿ ಕಳೆದು ಸಿಹಿ ಹೆಚ್ಚಿ<br>ಎಲ್ಲರೆದೆಗಳ ತುಂಬ ಸವಿಚೈತ್ರವು. | 1 × 3 = 3 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ಹೇಳಿಕೆಗಳಿಗೆ ಸಂದರ್ಭಸಹಿತ ಸ್ವಾರಸ್ಯ ಬರೆಯುವುದು :** | 4 × 3 = 12 |
| | ಕೃತಿ, ಕರ್ತೃ, ಪಠ್ಯ | 1 ಅಂಕ |
| | ಯಾರು–ಯಾರಿಗೆ | 1 ಅಂಕ |
| | ಭಾಷಾಶೈಲಿ, ಪದಬಂಧಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 31. | *"ಸಾವಿರಾರು ಮಳೆಬಿಲ್ಲುಗಳು ಸೇರಿ ಕುಣಿದಂತೆ ತೋರುತ್ತಿತ್ತು"*<br>ಈ ಮೇಲಿನ ವಾಕ್ಯವನ್ನು ಕುವೆಂಪುರವರು ಬರೆದಿರುವ ನನ್ನ ಗೋಪಾಲ ಎಂಬ ಗದ್ಯಭಾಗವನ್ನು 'ನನ್ನ ಗೋಪಾಲ' ಎಂಬ ಕೃತಿಯಿಂದ ಆರಿಸಲಾಗಿದೆ.<br>ಗೋಪಾಲನು ಬನದ ವರ್ಣನೆಯನ್ನು ತಿಳಿಸುತ್ತಾ ತಾಯಿಗೆ ಹೇಳುತ್ತಾನೆ.<br>ಏನಮ್ಮ ಸೊಗಸು, ಏನು ಆನಂದ ಮಲ್ಲಿಗೆಯ ಹೂವು, ಕೇದಗೆಯ ಹೂವು ಸಂಪಿಗೆ ಹೂವು ಪರ್ವತ ಬಾಳೆಯ ಹೂವ, ಗೋರಂಟಿಯ ಹೂವು ಎಂದು ಹೇಳುತ್ತಾ ಬಣ್ಣಬಣ್ಣದ ಹೂಗಳ ಸೊಬಗು ಸಾವಿರಾರು ಮಳೆಬಿಲ್ಲುಗಳು ಸೇರಿ ಕುಣಿದಂತೆ ತೋರುತ್ತಿತ್ತೆಂದು ತಾನು ಕಂಡ ಬನದ ವರ್ಣನೆಯನ್ನು ತಿಳಿಸುತ್ತಾನೆ. | |
| 32. | *"ಅವು ಮನಸ್ಸಿನಲ್ಲಿ ಗಸ್ತು ತಿರುಗುತ್ತಿರಬೇಕು."*<br>ಈ ಮೇಲಿನ ವಾಕ್ಯವನ್ನು ಬಿ.ಪಿ. ರಾಧಾಕೃಷ್ಣ ಬರೆದಿರುವ ಸಿ.ವಿ. ರಾಮನ್ ಎಂಬ ಕೃತಿಯಿಂದ 'ಶಿಷ್ಯವತ್ಸಲ ರಾಮನ್' ಎಂಬ ಗದ್ಯಭಾಗದಿಂದ ಆರಿಸಲಾಗಿದೆ.<br>ರಾಮನ್‌ರವರು ಶಿಷ್ಯರ ಅಭಿವೃದ್ಧಿಗಾಗಿ ನಿರ್ವಂಚನೆಯಿಂದ ವಿಷಯಗಳನ್ನು ಚರ್ಚಿಸಿ ಹೊಸ ಹೊಸ ವಿಚಾರಗಳ ಆವಿಷ್ಕಾರ ಮಾಡಲು ಪ್ರೇರಣೆ ಮಾಡುತ್ತಿದ್ದರು. ಅವರು ಹಾಕಿಕೊಟ್ಟ ಮೇಲ್ಪಂಕ್ತಿ ವಿಜ್ಞಾನ ವಿಷಯದ ಬೋಧಕರೆಲ್ಲರಿಗೂ ಆದರ್ಶವಾಗಿತ್ತು. ವಾಸ್ತವವಾಗಿ ವಿಜ್ಞಾನ ಎಂದರೆ ಭಾವನೆಗಳು. ಅವುಗಳು ಮನಸ್ಸಿನಲ್ಲಿ ಗಸ್ತು ತಿರುಗುತ್ತಿರಬೇಕು. ಆಗ ಹೊಸ ಸೃಜನಾತ್ಮಕ ಆವಿಷ್ಕಾರಗಳು ಹುಟ್ಟಲು ಕಾರಣವಾಗುತ್ತವೆಂದು ಹೇಳುತ್ತಿದ್ದರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

33. *"ನನ್ನ ಇರುವಿಕೆಯ ಅರಿವಾಗುತ್ತದೆ."*

ಈ ಮೇಲಿನ ವಾಕ್ಯವನ್ನು ಸುಕನ್ಯಾ ಮಾರುತಿಯವರು ಬರೆದಿರುವ ನಾನೆಂಬ ಮಾಯೆ ಕವನ ಸಂಕಲನದ 'ಅರಿವು' ಪದ್ಯದಿಂದ ಆರಿಸಿಕೊಳ್ಳಲಾಗಿದೆ.

ಕವಯಿತ್ರಿಯು ಮಹಾಮನೆಯ ಎಂಜಲೆಲೆ ಪಂಕ್ತಿಯನ್ನು ದಾಟಿ, ಮಹಾದ್ವಾರದಿಂದ ಹೊರಬಿದ್ದು ಸ್ವಚ್ಛವಾದ ರಾಜಬೀದಿಯಲ್ಲಿ ಸಾಗಿ, ಮೈದಾನ ತುಲುಪಿ ಅದರ ವೈಶಾಲ್ಯ ಕಂಡಾಗ ಮಹಾಮನೆಯ ಸಣ್ಣತನ ಗೊತ್ತಾಗಿ ಹೋಗುತ್ತದೆ. ಆನಂದದಿಂದ ಕವಯಿತ್ರಿಯು ಕಣ್ಮುಚ್ಚಿದಾಗ ನನ್ನ ಇರುವಿಕೆಯ ಅರಿವಾಗುತ್ತದೆಂದು ಹೇಳುತ್ತಾರೆ.

34. *"ಬಳಲಿದವರಿಗೆಲ್ಲ ಕೈಯ ನೀಡುತಿರುವನು."*

ಈ ಮೇಲಿನ ವಾಕ್ಯವನ್ನು ಸು.ರಂ. ಎಕ್ಕುಂಡಿ ಅವರ ಕಥನ ಕವನಗಳು ಎಂಬ ಕವನ ಸಂಗ್ರಹದ 'ನನ್ನ ಹಾಗೆಯೆ' ಪದ್ಯಭಾಗದಿಂದ ಆರಿಸಲಾಗಿದೆ.

ಗೊಮ್ಮಟನು ಹತ್ತುವವರ ಇಳಿಯುವವರ ನಿಂತು ನೋಡುತ್ತಿರುವನು, ನಿಲ್ಲುವವರ ನಡೆಯುವವರ ಲೆಕ್ಕ ಮಾಡುತ್ತಿರುವನು. ಹತ್ತಿ ಇಳಿಯುವಾಗ ಆಯಾಸವಾಗುವ ಜನರಿಗೆ ಕೈಯನ್ನು ನೀಡಿ ಅವರ ಆಯಾಸವನ್ನು ಪರಿಹಾರ ಮಾಡಿ ಸಂತೋಷಗೊಳಿಸುವನು.

**ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :** $2 \times 3 = 6$

| | |
|---|---|
| ಜನ್ಮಸ್ಥಳ, ಕಾಲ | 1 ಅಂಕ |
| ಕೃತಿಗಳು, ಪ್ರಶಸ್ತಿ | 1 ಅಂಕ |
| ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| ಒಟ್ಟು | 3 ಅಂಕಗಳು |

35. *ಬಿ.ಪಿ. ರಾಧಾಕೃಷ್ಣ :*

ಬಿ.ಪಿ. ರಾಧಾಕೃಷ್ಣರವರು ೧೯೧೮ ರಿಂದ ೨೦೧೨ (1918-2012) ರವರೆಗೆ ಜೀವಿಸಿದ್ದರು. ಇವರು ಬೆಂಗಳೂರಿನಲ್ಲಿ ಜನಿಸಿದ್ದರು.

ಇವರ ಕೃತಿಗಳು ಸಿ.ವಿ. ರಾಮನ್, ಚಾರ್ಲ್ಸ್ ಡಾರ್ವಿನ್, ರಾಮಾನುಜಂ, ಮೇರಿಕ್ಯೂರಿ ಮುಂತಾದವರ ಜೀವನ ಚರಿತ್ರೆಗಳನ್ನು ಬರೆದಿದ್ದರಾರೆ.

ಇವರ ಸಾಹಿತ್ಯ ಸೇವೆಗಾಗಿ ಮೂರು ಬಾರಿ ಸಾಹಿತ್ಯ ಅಕಾಡಮಿ ಪ್ರಶಸ್ತಿ. ೧೯೯೧ ರಲ್ಲಿ ಪದ್ಮಶ್ರೀ ಪ್ರಶಸ್ತಿ ಮತ್ತು ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿಗಳು ಲಭಿಸಿವೆ.

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 36. | ಎಂ. ಗೋಪಾಲಕೃಷ್ಣ ಅಡಿಗ : | |
| | ಇವರ ಕಾಲ ೧೯೧೮–೧೯೯೨ (1918-1992). ಇವರು ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಮೊಗೇರಿಯಲ್ಲಿ ಜನಿಸಿದರು. | |
| | ಇವರು ಭಾವತರಂಗ, ಚಂಡಮದ್ದಳೆ, ಭೂಮಿಗೀತ, ನಡೆದುಬಂದ ದಾರಿ ಮೊದಲಾದ ಕವನ ಸಂಕಲನಗಳನ್ನು, ಅನಾಥೆ, ಆಕಾಶದೀಪ ಎಂಬ ಕಾದಂಬರಿಗಳನ್ನು ಬರೆದಿದ್ದಾರೆ. | |
| | ಇವರಿಗೆ ಕೇಂದ್ರ ಹಾಗೂ ರಾಜ್ಯ ಸಾಹಿತ್ಯ ಅಕಾಡಮಿ ಪ್ರಶಸ್ತಿ, ಕೇರಳದ ಕುಮಾರನ್ ಆಶಾನ್ ಪ್ರಶಸ್ತಿ, ಮಧ್ಯಪ್ರದೇಶದ ಕಬೀರ್ ಸಮ್ಮಾನ್ ಪ್ರಶಸ್ತಿಗಳು ದೊರೆತಿವೆ. | |
| | ಐವತ್ತೊಂದನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ ಆಗಿದ್ದರು. | |
| | **ಎಂಟು–ಹತ್ತು ವಾಕ್ಯಗಳಿಗೆ ಮೀರದಂತೆ ಉತ್ತರಿಸುವುದು :** | 2 × 4 = 8 |
| | ವಿಷಯಾಂಶಕ್ಕೆ | 3 ಅಂಕಗಳು |
| | ಭಾಷಾಶೈಲಿ, ಪದಬಳಕೆ | 1 ಅಂಕ |
| | ಒಟ್ಟು | 4 ಅಂಕಗಳು |
| 37. | ಸಹ್ಯಾದ್ರಿಯು ಸಹನೆ ಕಳೆದುಕೊಳ್ಳಲು ಕಾರಣಗಳೆಂದರೆ. ಏರುತ್ತಿರುವ ಜನಸಂಖ್ಯೆಯಿಂದಾಗಿ ಕೃಷಿ ಭೂಮಿಗಾಗಿ ರೈತರು ಅರಣ್ಯ ಕಡಿದು ಅಕ್ರಮ ಸಾಗುವಳಿ ಆರಂಭಿಸಿದ್ದು; ಹಣದಾಸೆಗಾಗಿ ಕಾಡುದೋಚುವವರ ಸಂಖ್ಯೆ ಹೆಚ್ಚಾಗಿದ್ದು, ಸರ್ಕಾರ ದೇಶದ ಅಭಿವೃದ್ಧಿಗೆಂದು ಉದ್ದಿಮೆಗಳನ್ನು ಸ್ಥಾಪಿಸಿ ಅರಣ್ಯ ನಾಶಪಡಿಸಿದ್ದು; ಸಹ್ಯಾದ್ರಿಯನ್ನು ಕಾಪಾಡಬೇಕಿದ್ದ ಮಾಲೀಕನೆ ತನ್ನ ನೂರು ತೋಳುಗಳಿಂದ ಕಾಡಿಗೆ ಕೊಡಲಿ ಬೀಸಿದ್ದು; ತಾನು ದೋಚಿದಲ್ಲದೆ ದೋಚಲು ಸಿದ್ಧರಾದ ಉದ್ದಿಮೆದಾರರಿಗೆ ಕರೆದು ಕೊಡಲಿ, ಸಿಡಿಮದ್ದು ಕೊಟ್ಟಿದ್ದು ನೋಡನೋಡುತ್ತಾ ಸಹ್ಯಾದ್ರಿ ನಿರ್ನಾಮವಾಗಿ ತನ್ನ ಸಹನೆಯನ್ನು ಕಳೆದುಕೊಳ್ಳುತ್ತಿದೆ. | |
| | ಅದರ ಪರಿಣಾಮ ಅರಣ್ಯಗಳ ಎಡೆಬಿಡದ ಬಳಕೆಯಿಂದಾಗಿ ಭೂಮಿಯ ಮೇಲಿನ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಮಣ್ಣಿನ ಕವಚ ಕಳೆದು ಹೋಗಿ ಭೂಮಿಯ ಫಲವತ್ತತೆ ಕಡಿಮೆಯಾಗುತ್ತಿದೆ. ಕೆರೆ, ಸರೋವರ ಅಣೆಕಟ್ಟುಗಳಲ್ಲಿ ಹೂಳು ತುಂಬಿ ನೀರಿನ ನಿಕ್ಷೇಪ ಖಾಲಿಯಾಗುತ್ತಿದೆ. ಪ್ರವಾಹದ ಹಾವಳಿ ಹೆಚ್ಚಿ ಭೂಕುಸಿತವಾಗುತ್ತಿದೆ. ವನ್ಯಮೃಗಗಳು ಆಶ್ರಯತಾಣ ತಪ್ಪಿ ನಾಡಿಗೆ ಲಗ್ಗೆ ಹಾಕುತ್ತಿವೆ. | |
| | *ಅಥವಾ* | |
| | ಪಶ್ಚಿಮ ಘಟ್ಟಗಳನ್ನು ಅತಿಯಾಗಿ ದೋಚಿದರಿಂದ ಹವಾಮಾನದ ಏರುಪೇರು, ಅತಿವೃಷ್ಟಿ, ಭೂಕುಸಿತ ಪ್ರವಾಹಪೀಡೆ, ಕುಡಿಯುವ ನೀರಿನ ಅಭಾವ ಸಾಂಕ್ರಾಮಿಕ ರೋಗ ಈ ಎಲ್ಲಾ ಅದ್ವಾನಗಳಿಗೆ ಪಶ್ಚಿಮ ಘಟ್ಟಗಳ ಪತನವೇ ಕಾರಣ. | |
| | ಮಳೆಯ ರಭಸವನ್ನು ತಡೆದು ನೀರನ್ನು ನಿಧಾನವಾಗಿ ಭೂಮಿಯೊಳಗೆ ಇಂಗಿಸಬೇಕಿದ್ದ ಮರಗಳು ಕಡಿಮೆಯಾಗಿ ಪ್ರವಾಹದ ಹಾವಳಿ ಹೆಚ್ಚುತ್ತಿದೆ. ಅಂತರ್ಜಲ ಕಡಿಮೆಯಾಗಿ ಬೇಸಗೆಯಲ್ಲಿ ನದಿಗಳು ಬತ್ತತೊಡಗಿವೆ. | |
| | ವನ್ಯಮೃಗಗಳು ಆಶ್ರಯ ತಪ್ಪಿ ಹೊಲಗದ್ದೆಗಳಿಗೆ ದಾಳಿಯಿಡುತ್ತಿವೆ. ಕ್ಯಾಸನೂರು ರೋಗಾಣುಗಳು ಕಾಡುಬಿಟ್ಟು ನಾಡಿಗೆ ಹಬ್ಬುತ್ತಿವೆ. ಏಕಜಾತಿ ಸಸ್ಯಗಳಿಂದಾಗಿ ಕೀಟಗಳ ಹಾವಳಿ ಹೆಚ್ಚುತ್ತಿವೆ. ಕಾಡುಗಳಲ್ಲಿ ಮೇಯಲು ಹೋದ ಗರ್ಭಿಣಿ ಜಾನುವಾರುಗಳು ಗರ್ಭಪಾತಕ್ಕೊಳಗಾಗುತ್ತಿದೆ. | |
| | ಅರಣ್ಯಗಳ ಅತಿ ಬಳಕೆಯಿಂದ ಭೂಮಿಯ ಮೇಲಿನ ಮಣ್ಣಿನ ಕವಚ ತೊಳೆದು ಹೋಗಿ ಭೂಮಿಯ ಫಲವತ್ತತೆ ಕಡಿಮೆಯಾಗುತ್ತಿದೆ. ಕೆರೆ, ಸರೋವರ, ನದಿ, ಒಡ್ಡು, ಅಣೆಕಟ್ಟುಗಳಲ್ಲಿ ಹೂಳು ತುಂಬಿ ನೀರಿನ ನಿಕ್ಷೇಪ ಖಾಲಿಯಾಗುತ್ತಿದೆ. | |
| | ತಾಪಮಾನ ಹೆಚ್ಚಿ ವಾತಾವರಣದ ಸ್ಥಿತಿಯೆ ಆಯೋಮಯವಾಗಿದೆ. | |
| 38. | ವಿರಾಟನ ಮಗನಾದ ಉತ್ತರನು ಹೆಂಗೆಳೆಯರ ಮುಂದೆ ತನ್ನ ಸಾಮರ್ಥ್ಯಕ್ಕೆ ಸಮನಾದ ಸಾರಥಿ ಸಿಕ್ಕರೆ ಕೌರವನ ಸೈನ್ಯವನ್ನು ನಾಶಪಡಿಸುತ್ತೇನೆ; ಎಂದು ಹೇಳುತ್ತಿರುವಾಗ ಬೃಹನ್ನಳೆಯ ವೇಷಧಾರಿಯಾದ ಅರ್ಜುನನೆ ಸಾರಥಿಯಾಗುತ್ತಾನೆ. ಉತ್ತರನು ಕೌರವನ ಸೈನ್ಯವನ್ನು ನೋಡಿ ಎಷ್ಟು ದೂರ ದೃಷ್ಟಿಹರಿಸಿದರೂ ಸೇನಾ ಸಾಗರವೇ ಕಾಣಿಸುತ್ತಿದೆ. ಇದೊಂದು ಅದ್ಭುತ. ಈ ಸೈನ್ಯವನ್ನು ಪೊಡವಿಯೀದುದೊ, ಇಂಥ ಸೈನ್ಯದೊಡನೆ ಯುದ್ಧ ಮಾಡುವುದು ಶಿವನಿಂದ ಸಾಧ್ಯ ಹೇಗೆ ಹೋರಾಡಿ ಗೆಲ್ಲುವುದೆಂದು ಚಿಂತಿಸಿದಾಗ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
| --- | --- | --- |
| | ಅರ್ಜುನನು ರಥವನ್ನು ನಗುತ್ತಾ ನಾಲ್ಕೆಂಟಡಿ ನೂಕಿದಾಗ ಈ ಸಾರಥಿಯೆ ನನ್ನನ್ನು ಕೊಂದನೆಂದು ಸಂವರಿಸಿ ರಥವ ಹಿಂದಕೆ ಬಂದು ಮೆಲ್ಲನೆ ಜಿಗಿದು ಬಿಟ್ಟ ಮಂಡೆಯಲ್ಲಿಯೇ ಓಡುತ್ತಾನೆ. ಇದನ್ನು ನೋಡಿದ ಅರ್ಜುನನು. ಉತ್ತರನನ್ನು ಕುರಿತು ಗದರಿ ವನಜಮುಖಿಯರ ಮುಂದೆ ಬಾಯಿಗೆ ಬಂದಂತೆ ಜಂಭ ಕೊಚ್ಚಿಕೊಂಡೆ, ಈಗ ಅದೇನಾಯಿತು ಶತ್ರುಗಳನ್ನು ನಾಶಪಡಿಸದೆ ನಾಡ ನರಿಯಂತೆ ಹಲ್ಲುಕಿರಿದು; ಬಿಡು ಎಂದು ಹೇಳುತ್ತೀಯೆ, ನಾನು ಬಿಡುವುದಿಲ್ಲ ನಡೆ ಯುದ್ಧ ಮಾಡು ಎನ್ನುತ್ತಾನೆ.<br><br>ಉತ್ತರನು ಭೂಸುರರು ಯುದ್ಧ ಮಾಡಿ ಬಂದ ಪಾಪವನ್ನು ಅಶ್ವಮೇಧಯಾಗವನ್ನು ಮಾಡಿ ಕಳೆದುಕೊಳ್ಳುವರು ನಾವು ಧರಣಿಯಲಿ ಪ್ರತ್ಯಕ್ಷವಾಗಿಯೆ ಮಾಡಬಹುದು. ನಮಗೆ ಸುರರ ಸತಿಯರು ಬೇಡ, ಇಂದ್ರ ಪದವಿಯೂ ಬೇಡ. ನಮ್ಮರಮನೆಯ ಸತಿಯರೇ ಸಾಕು, ನಮ್ಮ ಅರಸುತನವೆ ನಮಗಿಂದ್ರ ಪದವಿ ಎನ್ನುತ್ತಾನೆ.<br><br>ಅಥವಾ<br><br>ಮಧ್ಯಮ ಪಾಂಡವನಾದ ಅರ್ಜುನ ಧೀರ, ಶೂರ, ಉದ್ದಾತ ನಾಯಕ, ಪರಾಕ್ರಮಶಾಲಿ, ಶಿವನಿಂದ ಪಾಶುಪತಾಸ್ತ್ರವನ್ನು ಪಡೆದ ವೀರ, ಎಂತಹಾ ಸಂದರ್ಭದಲ್ಲಿಯೂ ಧೈರ್ಯವನ್ನು ಕಳೆದುಕೊಳ್ಳದ; ತನ್ನ ಆಶ್ರಯ ಕೇಳಬಂದವರಿಗೆ ಆಶ್ರಯದಾತ. ಕುರುಕ್ಷೇತ್ರ ಮಹಾಯುದ್ಧದಲ್ಲಿ ಕರ್ಣನೇ ಮೊದಲಾದ ಅತಿರಥ, ಮಹಾರಥರನ್ನು ಸೋಲಿಸಿದ ಮಹಾಪರಾಕ್ರಮಿ. ಅಣ್ಣನ ತಪ್ಪಿನಿಂದಾಗಿ, ಶಕುನಿ ಕುತಂತ್ರದಿಂದ ವನವಾಸ ಹಾಗೂ ಅಜ್ಞಾತವಾಸವನ್ನು ಮಾಡಬೇಕಾಗಿ ಬಂತು.<br><br>ಆದರೆ ಇದಕ್ಕೆ ವಿರುದ್ಧ ಗುಣಸ್ವಭಾವ ಉತ್ತರನದು. ಹಂಗೆಳೆಯರ ಮುಂದೆ ಜಂಭ ಕೊಳ್ಳುವ ಈತ ಅಂಜುಬುರುಕ.<br><br>ಕೌರವನ ಸೇನೆಯನ್ನು ನೋಡಿ ಹೆದರಿ ಯುದ್ಧಭೂಮಿಯಲ್ಲಿ ಅರ್ಜುನನ ರಥದಿಂದ ಜಿಗಿದು ಬದುಕಿದೆನೆಂದು ಬಿಟ್ಟ ಮಂಡೆಯಲ್ಲಿಯೆ ಓಡಿ ಹೋಗುವ ಹೇಡಿ.<br><br>ನನಗೆ ಇಂದ್ರ ಪದವಿಯೂ ಬೇಡ ಸುರರ ಸತಿಯರೂ ಬೇಡ; ಎಮ್ಮರ ಮನೆಯ ನಾರಿಯರೆ ಸಾಕು; ಎಮ್ಮರಸುತನವೆ ಎಮಗಿಂದ್ರ ಪದವಿಯು ಎನ್ನುವ ಮನೋಭಾವದ ವ್ಯಕ್ತಿ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
| --- | --- | --- |
| | **ವಿಭಾಗ – 'ಬಿ'** | |
| | **ಬಹು-ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | 12 × 1 = 12 |
| 39. | (ಬಿ) ಆದೇಶ ಸಂಧಿ | |
| 40. | (ಡಿ) ಸಪ್ತಮೀ | |
| 41. | (ಬಿ) ದ್ವಿರುಕ್ತಿ | |
| 42. | (ಡಿ) ವನ | |
| 43. | (ಬಿ) ಮೌನ | |
| 44. | (ಎ) ಅರಮನೆ | |
| 45. | (ಸಿ) ಆರು | |
| 46. | (ಬಿ) ಅವಮಾನ | |
| 47. | (ಡಿ) ಮನುಷ್ಯ | |
| 48. | (ಎ) ನಾಮಪ್ರಕೃತಿ | |
| 49. | (ಎ) ಸೈನ್ಯ | |
| 50. | (ಎ) ಮನೆಗಳು | |
| | **ಅಪಠಿತ ಗದ್ಯ :** (ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿಯುತ್ತರಕ್ಕೆ ಒಂದು ಅಂಕ) | 4 × 1 = 4 |
| 51. | ತಾಳ್ಮೆ, ಪ್ರೀತಿ, ಕರುಣೆ, ದಾನಬುದ್ಧಿ, ನಿಸ್ವಾರ್ಥ ಸೇವಾಭಾವ ಇವೇ ಮೊದಲಾದವುಗಳು ರಚನಾತ್ಮಕ ಭಾವನೆಗಳು. | |
| 52. | ಮನಸ್ಸು ಉತ್ಸಾಹಯುತ, ಆರೋಗ್ಯಯುತ ಚಟುವಟಿಕೆಗಳಿಗೆ ಕಾರಣವಾಗುತ್ತದೆ. | |
| 53. | ಭಯ, ಚಿಂತೆ, ದ್ವೇಷ, ಅಸೂಯೆ, ಸೋಲಿನ ಭಾವನೆ ಹಾಗೂ ಸಂಕುಚಿತವಾದ ಸ್ವಾರ್ಥ ಇವು ನಿಷೇಧಮಯವಾದ ಭಾವನೆಗಳಾಗಿವೆ. | |
| 54. | ಪ್ರಸನ್ನತೆ, ಶಾಂತತೆ, ಧ್ಯರ್ಯ, ಆತ್ಮವಿಶ್ವಾಸ ದೃಢನಿಶ್ಚಯ ಇವುಗಳು ಶರೀರದ ಸುಸ್ಥಿತಿಗೆ ಕಾರಣವಾಗಿವೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 55. | ಗಾದೆಯನ್ನು ವಿಸ್ತರಿಸಿ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ) | $1 \times 3 = 3$ |
| | ಗಾದೆಯ ಮಹತ್ವದ ವಿವರಣೆ | 1 ಅಂಕ |
| | ಗಾದೆಯ ಅರ್ಥ ವಿವರಣೆ | 1 ಅಂಕ |
| | ಭಾಷಾಶೈಲಿಗೆ, ಪದಬಳಕೆಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 56. | ಪತ್ರ ಲೇಖನ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ) | $1 \times 4 = 4$ |
| | ವೈಯಕ್ತಿಕ ಪತ್ರ : | |
| | ಇಂದ ವಿಳಾಸ, ದಿನಾಂಕ, ಪ್ರಾರಂಭದ ಒಕ್ಕಣೆ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸಹಿಯೊಂದಿಗೆ ಮುಕ್ತಾಯ, ಗೆ ವಿಳಾಸ | 1 ಅಂಕ |
| | ಒಟ್ಟು | 4 ಅಂಕಗಳು |
| | ಅಥವಾ | |
| | ವ್ಯಾವಹಾರಿಕ ಪತ್ರ : | |
| | ಇಂದ ವಿಳಾಸ, ಗೆ ವಿಳಾಸ, ವಿಷಯ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸಹಿಯೊಂದಿಗೆ ಮುಕ್ತಾಯ, ಸ್ಥಳ, ದಿನಾಂಕ | 1 ಅಂಕ |
| | ಒಟ್ಟು | 4 ಅಂಕಗಳು |
| 57. | ಪ್ರಬಂಧ ಬರೆವಣಿಗೆ : (ಯಾವುದಾದರೂ ಒಂದಕ್ಕ ಮಾತ್ರ) | $1 \times 4 = 4$ |
| | ಪೀಠಿಕೆ / ಪ್ರಸ್ತಾವನೆ | 1 ಅಂಕ |
| | ವಿಷಯ ನಿರೂಪಣೆ | 2 ಅಂಕಗಳು |
| | ಭಾಷಾಶೈಲಿ, ಮುಕ್ತಾಯ / ಉಪಸಂಹಾರ | 1 ಅಂಕ |
| | ಒಟ್ಟು | 4 ಅಂಕಗಳು |